# ಮೆಸ್ಸಿ: ಕೈ ಮುರಿದರೂ ಟಿಆರ್‌ಪಿ

ಲಿಯೊನಲ್ ಮೆಸ್ಸಿ ಎದ್ದರೂ ಸುದ್ದಿ, ಬಿದ್ದರೂ ಸುದ್ದಿ. ಯೂರೋಪಿಯನ್ ಫುಟ್‌ಬಾಲ್ ಕ್ಲಬ್‌ಗಳಲ್ಲಿ ಅತ್ಯಂತ ಪ್ರತಿಷ್ಠಿತ ಎನ್ನಿಸಿರುವ ಸ್ಪೇನ್‌ನ ಬಾರ್ಸಲೊನಾ ಕ್ಲಬ್‌ನ ನಾಯಕನಾಗಿರುವ ಮೆಸ್ಸಿ, ಸದಾ ಸುದ್ದಿಯಲ್ಲಿರುವಾತ. ಮೊನ್ನೆ ಸೆವಿಲ್ಲಾ ತಂಡದ ವಿರುದ್ಧ ಲೀಗ್ ಮ್ಯಾಚ್‌ನಲ್ಲಿ ಎದುರಾಳಿ ಆಟಗಾರನಿಗೆ ಡಿಕ್ಕಿ ಹೊಡೆದು ನೆಲಕ್ಕುರುಳಿದ ಮೆಸ್ಸಿ ಬಲಗೈ ಫ್ರಾಕ್ಚರ್ ಮಾಡಿಕೊಂಡು ಆಸ್ಪತ್ರೆ ಸೇರಿದ್ದಾನೆ. ಸದ್ಯದ ಸುದ್ದಿಯ ಪ್ರಕಾರ ಇನ್ನು ಒಂದು ತಿಂಗಳು ಆತ ಫುಟ್‌ಬಾಲ್ ಆಡುವಂತಿಲ್ಲ. ಮೆಸ್ಸಿಯ ಕೋಟ್ಯಂತರ ಅಭಿಮಾನಿಗಳ ಪಾಲಿಗೆ ಇದು ಕಹಿ ಸುದ್ದಿಯೇ. ಏಕೆಂದರೆ ಈ ಅವಧಿಯಲ್ಲಿ ಬಾರ್ಸಲೊನಾ ಕ್ಲಬ್ ಹಲವು ಪ್ರಬಲ ಎದುರಾಳಿ ತಂಡಗಳನ್ನು ಮುಖಾಮುಖಿ ಆಗಬೇಕಿದೆ. ಮೆಸ್ಸಿ ಇಲ್ಲದೆ ಬಾರ್ಸಲೊನಾ ಪಂದ್ಯ ಗೆಲ್ಲುವುದು ಅಷ್ಟು ಸುಲಭವಲ್ಲ. ಮೆಸ್ಸಿ ಇಲ್ಲದೆ ಆನಂತರದ ಒಂದು ಪಂದ್ಯವನ್ನು ತಂಡ ಗೆದ್ದಿದ್ದರೂ, ಉಳಿದ ಪಂದ್ಯಗಳು ಸಾಕಷ್ಟು ಸವಾಲು ಒಡ್ಡಲಿವೆ.

ಫುಟ್‌ಬಾಲ್ ಆಡುವಾಗ ಬೀಳುವುದು, ಕೈ ಅಥವಾ ಕಾಲು ಮುರಿಸಿಕೊಳ್ಳುವುದು ಮೆಸ್ಸಿಗೆ ಹೊಸತೇನಲ್ಲ. 2005ರಲ್ಲಿ ತಂಡದ ಜೊತೆಗೆ ಒಪ್ಪಂದ ಮಾಡಿಕೊಂಡ ಬಳಿಕ ಇದು 21ನೇ ಬಾರಿಗೆ ಆತ ಬಿದ್ದು ಫ್ರಾಕ್ಚರ್ ಮಾಡಿಕೊಳ್ಳುತ್ತಿರುವುದು. ಬಹುತೇಕ ಸಲ ಬಲಗಾಲು, ತಪ್ಪಿದರೆ ಎಡಗಾಲುಗಳು ಫ್ರಾಕ್ಚರ್ ಆಗಿವೆ. ಇದೇ ಮೊದಲ ಬಾರಿಗೆ ಬಲಗೈಗೆ ಫ್ರಾಕ್ಚರ್ ಆಗಿದೆ. ತನ್ನ ವೃತ್ತಿಜೀವನದಲ್ಲಿ ಇದುವರೆಗೆ ಮೆಸ್ಸಿ ಬಿದ್ದು ಗಾಯಗೊಂಡು ಒಟ್ಟು 80 ಪಂದ್ಯಗಳನ್ನು 'ಮಿಸ್' ಮಾಡಿಕೊಂಡಿದ್ದಾನೆ. ಆತನ ಅನುಪಸ್ಥಿತಿಯಲ್ಲಿ ಕ್ಲಬ್ 48 ಪಂದ್ಯಗಳಲ್ಲಿ ವಿಜಯ ಸಾಧಿಸಿದ್ದರೆ, 15 ಪಂದ್ಯಗಳಲ್ಲಿ ಸೋಲುಂಡಿದೆ. 17 ಪಂದ್ಯಗಳಲ್ಲಿ ಡ್ರಾ ಸಾಧಿಸಿದೆ. ಅಂದರೆ ಗೆಲುವಿನ ಪ್ರಮಾಣ ಶೇಕಡಾ 60ರಷ್ಟು ಮಾತ್ರ.

ಸಾಮಾನ್ಯವಾಗಿ ಕ್ರೀಡಾಪಟುಗಳು ತಮ್ಮ ಇಡೀ ದೇಹದ ಬದಲು ಕೈ, ಕಾಲು, ಬೆರಳು ಮುಂತಾಗಿ ವಿವಿಧ ಅಂಗಗಳಿಗೆ ದೊಡ್ಡ ಮೊತ್ತದ ವಿಮೆ ಮಾಡಿಸಿರುತ್ತಾರೆ. ಮೆಸ್ಸಿಯದ್ದು ಅದರಲ್ಲೂ ವಿಶ್ವದಾಖಲೆ. ಒಂದು ಮೂಲದ ಪ್ರಕಾರ, ಈತನ ಎರಡೂ ಕಾಲುಗಳಿಗೆ 750 ದಶಲಕ್ಷ ಯೂರೋಗೆ ವಿಮೆ ಮಾಡಿಸಲಾಗಿದೆ! ಈ ವಿಷಯದಲ್ಲಿ ಈತನ ಪ್ರತಿಸ್ಪರ್ಧಿ ರೊನಾಲ್ಡೊ ಕೂಡಾ ಹಿಂದಕ್ಕೆ ಬಿದ್ದಿದ್ದಾನೆ. ಆತನ ಕೈಕಾಲುಗಳಿಗೆ 90 ದಶಲಕ್ಷ



ಪೌಂಡ್‌ಗಳಿಗೆ ವಿಮೆ ಮಾಡಲಾಗಿದೆ. ಫಾರ್ಮುಲಾ ರೇಸ್‌ನ ವಿಶ್ವ ಚಾಂಪಿಯನ್ ಫರ್ನಾಂಡೊ ಅಲೊನ್ಸೊ ತನ್ನ ಹೆಬ್ಬೆರಳುಗಳಿಗೆ 13.5 ದಶಲಕ್ಷ ಡಾಲರ್‌ನ ವಿಮೆ ಮಾಡಿಸಿದ್ದರೆ, ಆಸ್ಟ್ರೇಲಿಯಾದ ಮಾಜಿ ವೇಗದ ಬೌಲರ್ ಮರ್ವ್ ಹ್ಯೂಸ್ ತನ್ನ ಬಿಲ್ಲಿನಂತಹ ಉದ್ದನೆಯ ಮೀಸೆಗೆ 3.70 ಲಕ್ಷ ಡಾಲರ್ ವಿಮೆ ಮಾಡಿಸಿಕೊಂಡಿದ್ದಾನೆ! ಆದರೆ ಅಂಗಾಂಗಗಳ ವಿಮೆಯ ಮಟ್ಟಿಗೆ ಮೆಸ್ಸಿಯದ್ದೇ ಅತ್ಯಂತ ದೊಡ್ಡ ಮೊತ್ತದ ಪಾಲಿಸಿ.

ಬಾರ್ಸಲೊನಾ ಕ್ಲಬ್ ಜತೆಗೆ ಮೆಸ್ಸಿಯ ಒಪ್ಪಂದ ಕಳೆದ ತಿಂಗಳಷ್ಟೇ ನವೀಕರಣಗೊಂಡಿದೆ. 2021ರವರೆಗೆ ಈ ಒಪ್ಪಂದವನ್ನು ವಿಸ್ತರಿಸಲಾಗಿದೆ. ಸದ್ಯಕ್ಕೆ ಆತ ಪಡೆಯುತ್ತಿರುವ ಸಂಭಾವನೆ ವಾರಕ್ಕೆ 65 ಲಕ್ಷ ಡಾಲರ್! ಕಳೆದ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು 16ರ ಹಂತದಲ್ಲೇ ಹೊರಬಿದ್ದರೂ, ಮೆಸ್ಸಿಗೆ ಕ್ಲಬ್ ಫುಟ್‌ಬಾಲ್‌ನಲ್ಲಿ ಇರುವ ಬೇಡಿಕೆ ಕಡಿಮೆ ಆಗಿಲ್ಲ. ಕ್ಲಬ್ ಫುಟ್‌ಬಾಲ್‌ನಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ಆಟಗಾರ ನೇಮರ್. ಅದೇ ರೀತಿ ಸಾಮಾಜಿಕ ಜಾಲತಾಣದಲ್ಲಿ ಅತ್ಯಧಿಕ ಅಭಿಮಾನಿಗಳನ್ನು ಹೊಂದಿರುವಾತ ರೊನಾಲ್ಡೊ. ಫೇಸ್‌ಬುಕ್‌ನಲ್ಲಿ ರೊನಾಲ್ಡೊಗೆ 122 ದಶಲಕ್ಷ ಹಿಂಬಾಲಕರಿದ್ದರೆ ಮೆಸ್ಸಿಗೆ ಇರುವುದು 89 ದಶಲಕ್ಷ ಅಷ್ಟೆ. ಆದರೆ ಮೈದಾನದಲ್ಲಿ ಮೆಸ್ಸಿ ಆಟಕ್ಕಿಳಿದರೆ ಟಿಕೆಟ್‌ಗಳು ವಾರ ಮೊದಲೇ ಸೋಲ್ಡ್ ಔಟ್ ಆಗುವುದು ಸುಳ್ಳಲ್ಲ. ಅಡಿಡಾಸ್, ಪೆಪ್ಸಿ, ಜಿಲೆಟ್, ಟರ್ಕಿಶ್ ಏರ್‌ಲೈನ್ಸ್ ಮುಂತಾದ ಪ್ರತಿಷ್ಠಿತ ಕಂಪನಿಗಳ ಜಾಹೀರಾತು ರಾಯಭಾರಿಯಾಗಿಯೂ ಮೆಸ್ಸಿಗೆ ಮಾರುಕಟ್ಟೆಯಲ್ಲಿ ದೊಡ್ಡ ಹೆಸರಿದೆ.

ಸಾಮಾಜಿಕ ಜಾಲತಾಣದಲ್ಲಿ ಮೆಸ್ಸಿಗಿಂತ ರೊನಾಲ್ಡೊ ಜನಪ್ರಿಯನಿದ್ದರೂ, 'ಲಿಯೊ ಮೆಸ್ಸಿ ಫೌಂಡೇಷನ್' ಮೂಲಕ ಈತ ಅನಾಥ ಮಕ್ಕಳ ಆರೋಗ್ಯ ರಕ್ಷಣೆಗೆ ವ್ಯಯಿಸುತ್ತಿರುವ ಹಣ ದೊಡ್ಡದು. ದುಡಿದಿರುವ ಅಪಾರ ಹಣವನ್ನು ಷೋಕಿಗೆ ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಈತ ಆಸ್ತಿಗಳನ್ನು ಖರೀದಿಸಲು ಬಳಸುತ್ತಾನೆ. ತನ್ನ ಬೃಹತ್ ಎಸ್ಟೇಟ್ ಮನೆಯ ಮುಂದೆ ಇತ್ತೀಚೆಗೆ ಅತ್ಯುತ್ತಮ ಫುಟ್‌ಬಾಲ್ ಪಿಚ್ ಒಂದನ್ನು ನಿರ್ಮಿಸಿದ್ದಾನೆ. ಚೀನಾದಲ್ಲಿ ಒಂದು ಥೀಮ್‌ಪಾರ್ಕ್ ಸ್ಥಾಪಿಸಿದ್ದು, ಅಲ್ಲಿ ಪ್ರವೇಶಿಸಿದರೆ ನೀವು ಮೆಸ್ಸಿ ಜೊತೆಗೆ ವರ್ಚುವಲ್ ಫುಟ್‌ಬಾಲ್ ಆಡಬಹುದು. ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ಗಿಂತ ಹೆಚ್ಚಾಗಿ ಈ ರೀತಿಯ ಚಟುವಟಿಕೆಗಳಲ್ಲಿ ಮೆಸ್ಸಿ ಅಭಿಮಾನಿಗಳ ಜೊತೆಗೆ ಗುರುತಿಸಿಕೊಳ್ಳಲುಬಯಸುತ್ತಾನೆ.

30ರ ಹರೆಯದ ಮೆಸ್ಸಿ ಫುಟ್‌ಬಾಲ್ ಕ್ರೀಡೆಯಲ್ಲಿ ಬದುಕಿರುವಾಗಲೇ ದಂತಕಥೆ ಆಗಿರುವಾತ. ಈ ಹಿಂದೆ ಪೀಲೆ, ಮರಡೊನಾ ಮುಂತಾದ ಮಹಾತಾರೆಯರು ಫುಟ್‌ಬಾಲ್‌ನಲ್ಲಿ ಬಂದಿದ್ದರೂ, ಆಗ ಈಗಿನಷ್ಟು ಸಾಮಾಜಿಕ ಜಾಲತಾಣಗಳ, ಜಾಹೀರಾತು ಕಂಪನಿಗಳು ಅಬ್ಬರವಿರಲಿಲ್ಲ. ಆದರೆ ಈಗ ಸಾಮಾಜಿಕ ಜಾಲತಾಣಗಳು ತಾರೆಯೊಬ್ಬನ ಜನಪ್ರಿಯತೆಯ ಅಳತೆಗೋಲುಗಳನ್ನು ನಮ್ಮ ಮುಂದೆ ಸ್ಪಷ್ಟವಾಗಿ ಎತ್ತಿ ತೋರುತ್ತವೆ. ವ್ಯಕ್ತಿಗತವಾಗಿ ಸ್ವಲ್ಪ ಅಂತರ್ಮುಖಿ ಆಗಿರುವ ಮೆಸ್ಸಿ, ಮೈದಾನಕ್ಕಿಳಿದರೆ ಮಾತ್ರ ಎಲ್ಲ ಆಟಗಾರರೊಂದಿಗೆ ಅದ್ಭುತ ಹೊಂದಾಣಿಕೆ ಸಾಧಿಸುತ್ತಾನೆ. ಆತ ಹೊಡೆದಿರುವ ಗೋಲುಗಳಷ್ಟೇ ಸಂಖ್ಯೆಯಲ್ಲಿ ಆತ ನೀಡಿದ ಪಾಸ್‌ಗಳಿಂದ ತಂಡಕ್ಕೆ ಗೋಲುಗಳು ಬಂದಿವೆ ಎನ್ನುವುದು ಆತನ ಆಟದ ಶೈಲಿಯ ಸೂಚನೆಯೂ ಹೌದು. ಸದ್ಯಕ್ಕೆ ಮೆಸ್ಸಿ ಕೈಗೆ ಆಗಿರುವ ಫ್ರಾಕ್ಚರ್ ದೊಡ್ಡದೇನಲ್ಲ. ಮೂರು ವಾರಗಳಲ್ಲಿ ಗುಣವಾಗುತ್ತದೆ ಎಂದು ವೈದ್ಯರು ಹೇಳಿದ್ದಾರೆ. ಆದರೆ ಮತ್ತೆ ಮೈದಾನಕ್ಕೆ ಇಳಿಯಲು ಇನ್ನೆರಡು ವಾರಗಳು ಬೇಕಂತೆ. ಅಷ್ಟರವರೆಗೆ ಮೆಸ್ಸಿ ಅಭಿಮಾನಿಗಳು ಯೂಟ್ಯೂಬ್‌ನಲ್ಲಿ ಆತನ ಹಳೆಯ ಪಂದ್ಯಗಳನ್ನು, ರೋಮಾಂಚಕ ಗೋಲುಗಳನ್ನು ನೋಡಿ ಸಮಾಧಾನ ಪಟ್ಟುಕೊಳ್ಳಬಹುದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65